'ಸುಧೀ ಒಳ್ಳೆ ಹೀರೊ ತರಹ, ಸೃಜಿ ಏನ್ ಕಮ್ಮಿ? ಮೇಡ್ ಫಾರ್ ಈಚ್ ಅದರ್ ಅನ್ನೋ ಹಾಗಿತ್ತು ಅವರ ಜೋಡಿ. ಹುಟ್ಟು ಶ್ರೀಮಂತ, ಉನ್ನತ ವಿದ್ಯಾಭ್ಯಾಸ, ಬಿಸಿನೆಸ್ ಯಾವುದಕ್ಕೂ ಕಡಿಮೆ ಇರಲಿಲ್ಲ. ಸೃಜಿ ನನಗೆ ಇನ್ನೂ ಹತ್ತಿರವಾದಳು – ನಾವಿಬ್ಬರು ಸೇರಿ ಸುಧೀನ ಕೀಟಲೆ ಮಾಡುವಷ್ಟು, ಅವನು ಮುಕ್ತವಾಗಿ ಸ್ವೀಕರಿಸಿ ಸ್ಪಂದಿಸುವಷ್ಟು... ಈ ಮೂವರನ್ನೂ ಬೆಸೆದದ್ದು ಒಂದು ಸುಂದರ ಸ್ನೇಹ.'

'...'

'ಮದುವೆಯಾದ ವರ್ಷಕ್ಕೆ ಅವನಿಗೆ ಭೀಕರ ಅಪಘಾತವಾಯ್ತು. ಬದುಕಿ ಉಳಿದದ್ದೇ ಹೆಚ್ಚು. ಲೈಂಗಿಕ ಸಾಮರ್ಥ್ಯ ಕಳೆದುಕೊಂಡು ಕುಗ್ಗಿಹೋದ. ಮುಜುಗರದ ದಿನಗಳು, ಮಾನಸಿಕ ವೇದನೆಗೆ ಕೊನೆಯಿಲ್ಲ. ಈ ಪರಿಸ್ಥಿತಿಯಲ್ಲಿ ಸೃಜಿಯ ಸ್ಥಿತಿ ಯಾರಿಗೂ ಬೇಡ. ಚಿಕ್ಕ ವಯಸ್ಸು. ಇನ್ನೊಂದು ಮದುವೆಯಾಗಿ ಸೆಟಲ್ ಆಗು ಅಂತ ಒಂದಷ್ಟು ದಿನ ಗೋಗರೆದ – ಅವಳು ನಿರಾಕರಿಸಿಬಿಟ್ಟಳು. ಅದಾದ ಮೇಲೆ ಓದು ಮುಂದುವರೆಸಿ, ಎಂ.ಎ. ಮಾಡಿ ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದು. ಇನ್ನು ಐದಾರು ತಿಂಗಳಿಗೆ ಡಾಕ್ಟರೇಟ್ ಸಿಗುತ್ತೆ.'

'ಬ್ರಿಲಿಯನ್ಸ್ ಆಡ್ಸ್ ಟು ಬ್ಯೂಟಿ!'

'ರಾತ್ರಿಯಾದರೆ ಮತ್ತೆ ಮನೆ, ಅದೇ ಸುಧಿ...' ನಾನು ಮುಂದುವರೆಸಿದೆ.

ಸರಕ್ಕನೆ ನನ್ನತ್ತ ನೋಡಿದ ಫಣಿ, ನನಗೆ ನಾಚಿಕೆಯೆನಿಸಿತು.

'ಸೃಜಿನ ನೋಡಿದ್ರೆ ಪಾಪ ಅನ್ಸುತ್ತೆ. ಬಟ್ ಟೂ ಪರ್ಸನಲ್; ಏನೂ ಹೇಳೋಕ್ಕಾಗೋಲ್ಲ.'

'ನಿಜ.'

ಬೆಳಗ್ಗೆ ಮೆಸೇಜ್‌ನಲ್ಲಿ ಹುಡುಗಾಟ ಆಡಿದ್ದು ಶೇರ್ ಮಾಡಲೇ ಅನ್ನಿಸಿತು... ಮತ್ತೆ ಯಾಕೋ ಬೇಡವೆನಿಸಿ ಸುಮ್ಮನಾದೆ.

'ನನ್ನ ಬಗ್ಗೆ ಸೃಜಿಗೆ ಏನಾದರೂ ಗೊತ್ತ?' ಕೇಳಿದೆ.

'ಸೃಜಿಗೆ ಏನು? ಗ್ರೂಪ್‌ನಲ್ಲಿ ಸುಮಾರು ಜನಕ್ಕೆ ಗೊತ್ತಿರುತ್ತೆ. ಅದರಲ್ಲೂ ನೀನು ಒಬ್ಬನೇ ಬಂದಿರೋದು. ವಾಪಸ್ ಬರೋಕ್ಕೆ ಮೊದಲೇ ಅವಳಿಗೆ ನಿನ್ನ ಬಿರುಕುಬಿಟ್ಟಿದ್ದ ದಾಂಪತ್ಯದ ಬಗ್ಗೆ ತಿಳಿದಿದೆ. ನಿನ್ನ ಹೆಂಡತಿ ಕಲೀಗ್ ಸ್ವರೂಪ ದತ್ತ, ಸೃಜಿಗೂ ಫ್ರೆಂಡ್. ಯಾರಿಗೂ ಹೇಳ್ಬೇಡ ಕತೆ. ಸೃಜಿ ನನಗೆ ಹೇಳಿದಾಗ ಗಾಬರಿಯೇನೂ ಆಗಲಿಲ್ಲ. ಇನ್ನಿಬ್ಬರು ಗುಸುಗುಸು ಮಾಡಿದ್ದರು. ಸೂಕ್ಷ್ಮವಾಗಿ ನಾನು ನಿನ್ನ ವಿಷಯ ಶೇರ್ ಮಾಡಿದೆ. ಹೇಳಿದೆನಲ್ಲ, ನಾವೂ ಗಾಸಿಪ್ ಮಾಡ್ತಿರ್ತೀವಿ. ಅದರಲ್ಲೂ ನಮಗೆ ತಿಳಿದವರು ಅಂದಾಗ ಕೊಂಚ ಕುತೂಹಲ – ಇದು ತೀರಾ ಸಹಜ ಅಲ್ವ. ಅದೇ ಟಾರ್ಗೆಟ್ ಎದುರುಬಂದಾಗ ದಿವ್ಯ ಮೌನ! ಇದೊಂದು ಒಪ್ಪಿತ ಸೋಗಲಾಡಿತನ, ಯಾರೂ ಹೊರತಲ್ಲ.'

ನಾನು ನಿಟ್ಟುಸಿರಿಟ್ಟೆ.

ನನ್ನ ಸ್ಥಿತಿ ತಿಳಿದ ಮೇಲೆ ಸೃಜಿ ಅಕ್ಕರೆ ತೋರಿಸುತ್ತಿರಬಹುದೆ? ಅವಳಿಗೂ ನನ್ನಮೇಲೆ ಕ್ಲಾಸ್‌ಮೇಟ್‌ಗಿಂತ ಮಿಗಿಲಾದ ವಿಶೇಷ ಕಾಳಜಿ? ಹಾಗಿಲ್ಲದೆ ಸಿಹಿ ನನ್ನ ಎಲೆಗೆ ಹಾಕಿದ್ದು, ತಾಂಬೂಲವನ್ನು ನಿರಾಕರಿಸದೇ ಇದ್ದದ್ದು ಇವನ್ನೆಲ್ಲ ಹೇಗೆ ಅರ್ಥೈಸುವುದು? ಒಂದಂತೂ ನಿಜ, ಫಣಿ ಹೇಳಿದ್ದು ಕೇಳಿದ ಮೇಲೆ ಸೃಜನಾಳ ಆಕರ್ಷಣೆ ಗಟ್ಟಿಯಾಗಿ, ಮೆಲ್ಲಮೆಲ್ಲನೆ ಆವರಿಸಿಕೊಳ್ಳತೊಡಗಿದಳು.

★★★

ರಾತ್ರಿಯೆಲ್ಲ ಸೃಜನಾಳ ಸುತ್ತ ನನ್ನ ಚಿತ್ತ. ಈ ತೃಷೆ ಎನ್ನುವುದು ಎಷ್ಟು ಸಂಕೀರ್ಣ! ಇತ್ತೀಚೆಗೆ ಡೇಟಿಂಗ್ ತುಂಬಾ ಕಾಮನ್ ಅನ್ನಿಸಿದರೂ ನನ್ನ ಪೀಳಿಗೆಯವರು ಎಲ್ಲೂ ಸಲ್ಲರು. ಮದುವೆಯ